# ಕನ್ನಡ ಕೂಟ ಸಮಾಚಾರ ಪತ್ರ

## Kannada Kuta Newsletter

ಕನ್ನಡ ಕೂಟ ಅಂಚೆಪೆಟ್ಟಿಗೆ ೫೦೯, ಆನ್ ಆರ್ಬರ್, ಮಿಚಿಗನ್ ೪೮೧೦೭, ಅ.ಸಂ.ಸಂ

KANNADA KUTA P.O. Box 509, Ann Arbor, Michigan 48107 USA

ಸಂಪುಟ ೧ : ಸಂಚಿಕೆ ೨ ಮಾರ್ಚ್ ೧೫, ೧೯೭೨

March 15. 1972 No. 2 Vol. I


### ನಮ್ಮ ಮಾತು

ಕನ್ನಡ ಕೂಟದ ಎರಡನೆಯ ಸಮಾಚಾರ ಪತ್ರಿಕೆಯನ್ನು ನಿಮ್ಮ ಹಸ್ತದಲ್ಲಿರಿಸುತ್ತಿದ್ದೇವೆ. ನಮ್ಮ ನೂರಾರು ಸದಸ್ಯರಿಗೆ, ಅಭಿಮಾನಿಗಳಿಗೆ ಕೂಟದ ಚಟುವಟಿಕೆಗಳು, ಇಂದಿನ ಸ್ಥಿತಿ, ಮುಂದಿನ ಗತಿ, ಸದಸ್ಯರ ಸುದ್ದಿ — ಇವುಗಳನ್ನು ವರದಿಮಾಡುವುದು ಈ ಪತ್ರಿಕೆಯ ಮುಖ್ಯ ಉದ್ದೇಶಗಳಲ್ಲಿ ಕೆಲವು.

ಕೂಟದ ಕೆಲಸವನ್ನು ಹಲವಾರು ಭಾಗಗಳಾಗಿ ಮಾಡಿ ಒಂದೊಂದು ಭಾಗದ ಕಾರ್ಯಭಾರವನ್ನು ವಹಿಸಿಕೊಂಡು ಮುಂದಾಳಾಗಿ ನಿಂತು ಕೆಲಸಮಾಡುತ್ತಿರುವವರ ಲೇಖನಗಳ ಜೋಡಣೆಯಿಂದ ಈ ಸಮಾಚಾರ ಪತ್ರಿಕೆಯನ್ನು ರೂಪಿಸಿದ್ದೇವೆ.

ಕೆಲವು ಕಾರ್ಯಭಾಗಗಳಲ್ಲಿ ನಿರೀಕ್ಷಿಸಿದಷ್ಟು ಪ್ರಗತಿ ಕಾರಣಾಂತರಗಳಿಂದ ಕಾರ್ಯರೂಪದಲ್ಲಿ ಇನ್ನೂ ಇಳಿದಿಲ್ಲ. ಮನಸ್ಸಿನ ಮಂಡಿಗೆಯಾಗಿಯೇ ಉಳಿದಿದೆ (ಉದಾ: ಮಕ್ಕಳ ಮಂಟಪ, ವಿಜ್ಞಾನ ಮತ್ತು ತಾಂತ್ರಿಕ ಸಾಹಿತ್ಯ, ಮನರಂಜಕ ಸಾಹಿತ್ಯ, ಅತಿಥಿ-ಆಮಂತ್ರಣ – ಇತ್ಯಾದಿ)!

ಈ ವಾರ್ತಾಪತ್ರಿಕೆ ಕೇವಲ ಕೂಟದ ಕೇಂದ್ರದಿಂದ ಸದಸ್ಯರಿಗೆ ವರದಿಯನ್ನು ಕೊಂಡೊಯ್ಯುವ ಒಂದೇ ಮಾರ್ಗದ ವಾಹನವಾಗದೆ ಕೇಂದ್ರಕ್ಕೆ ಸದಸ್ಯರ ಸುದ್ದಿಗಳು, ಸಲಹೆಗಳು, ಮತ್ತು ಅಭಿಪ್ರಾಯಗಳು ಬರುವಂತೆ ಮಾಡುವ ಸಾಧನವೂ ಆಗಬೇಕು. ಆಗ ಮಾತ್ರ, ಸಮಾಚಾರ ಪತ್ರ ಯಶಸ್ವಿಯಾಗಿ ಕೂಟದ ಕೇಂದ್ರಕ್ಕೂ ಮತ್ತು ಅಲ್ಲಲ್ಲಿ ಹರಡಿರುವ ಸದಸ್ಯರಿಗೂ ನಡುವಣ ಅತ್ಯವಶ್ಯಕವಾದ ಸಂಪರ್ಕಸೇತುವೆಯಾಗಲು ಸಾಧ್ಯ. ಈ ದೃಷ್ಟಿಯಿಂದ ನಮ್ಮ ಸದಸ್ಯಮಿತ್ರರಿಗಾಗಿ ಈ ಪತ್ರಿಕೆಯ ಕೊನೆಯ ಪುಟದಲ್ಲಿ ಸ್ವಲ್ಪ ಸ್ಥಳವನ್ನು ಮೀಸಲಾಗಿರಿಸಿದ್ದೇವೆ. ಸದಸ್ಯರ ಯೋಗಕ್ಷೇಮ, ಕೂಟದ ಕಾರ್ಯಕ್ರಮಗಳು ಮತ್ತು ಪ್ರಗತಿಯ ಬಗ್ಗೆ ಮೆಚ್ಚುಗೆ/ಟೀಕೆ, ಹೊಸ ವಿಷಯಗಳ ಸಲಹೆ ಮುಂತಾದುವನ್ನು ಸೂಚಿಸಲು ಈ ಸ್ಥಳವನ್ನು ಉಪಯೋಗಿಸಿಕೊಂಡು, ಅವಶ್ಯವಿದ್ದಲ್ಲಿ, ಮತ್ತೊಂದು ಪುಟದಲ್ಲಿ, ಮುಂದುವರಿಸಿ ನಮಗೆ ಕಳುಹಿಸುತ್ತೀರೆಂದು ನಂಬಿದ್ದೇವೆ.

### OUR WORD

This is the second Kannada Kuta newsletter we are placing in your hands. To keep our members informed of the activities of the Kannada Kuta, its programs and progress, the news about its members ---these are some of the important purposes of this newsletter. The present newsletter presents writings and reports by people who are directly involved in various tasks and programs of the Kuta. We have not been able to accomplish much in some of the programs (e.g., children's program, science & technology literature program, host family program, etc.). We need your interest and involvement more and more.

We like this newsletter to be not merely a vehicle for carrying news, ideas and information from only one side of the Kannada Kuta centre; it should also become a lively channel open to all the members of the Kannada Kuta for cultural enrichment, exchange of ideas, news, information, and creative expressions. In order to facilitate the participation of the members and gathering of news and information, we have attached a sheet to this newsletter for the use of our members. We urge you to use this sheet and feed us back making it your "news sheet". Hopefully we will make the next newsletter more relevant and interesting based on what each member sends as news to the Kannada Kuta community.

WE NEED YOUR NEWS

## ಕೂಟದ ಸದಸ್ಯತ್ವ ಬೆಳವಣಿಗೆ

ಶ್ರೀಮತಿ ದೀನಾ ಭಟ್

ಕೂಟದ ಬೆಳವಣಿಗೆಯ ಮುಖ್ಯವಾದ ಅಳತೆಗೋಲು ಅದರ ಸದಸ್ಯ ಸಂಖ್ಯೆ. ಕೂಟವು ಆರಂಭವಾದಾಗ ಸುಮಾರು ಹತ್ತು ಜನರನ್ನೊಳಗೊಂಡ ಸದಸ್ಯತ್ವ ಈಗ 170 ಆಗಿ ಬೆಳೆದಿದೆ. ಇದು ಸಾಧ್ಯವಾಗಿರುವುದು ನಾವು ಅನುಸರಿಸುತ್ತಿರುವ ಎರಡು ವಿಧಾನಗಳಿಂದ: ಜನರನ್ನು ಸಂಧಿಸಿದಾಗ ನಮ್ಮ ಉತ್ಸಾಹೀ ಸದಸ್ಯರು ಕೂಟದ ಪರಿಚಯ ಮಾಡಿಸಿ ಅವರನ್ನು ಸದಸ್ಯರಾಗುವಂತೆ ಪ್ರೋತ್ಸಾಹಿಸುವುದು; ಇದರ ಜೊತೆಗೆ ಕನ್ನಡ ಅಭಿಮಾನಿಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿರುವ ಕೆಲವು ಪರಿಚಯದವರಿಗೆ ಸದಸ್ಯತ್ವದ ಫಾರಂಗಳನ್ನು ಕಳುಹಿಸಿ ತಮಗೆ ಗೊತ್ತಿರುವ ಸ್ನೇಹಿತರಿಗೆ ಸದಸ್ಯರಾಗಲು ಸಲಹೆ ಮಾಡುವಂತೆ ಕೇಳಿಕೊಂಡು ಕಾಗದಗಳನ್ನು ಬರೆದದ್ದು. ಇದಕ್ಕೆ ನಿರೀಕ್ಷಿಸಿದಷ್ಟು ಫಲ ಬಂದಿಲ್ಲ. ಪ್ರತಿಯೊಬ್ಬ ಸದಸ್ಯರೂ ತಮಗೆ ಗೊತ್ತಿರುವ ಸ್ನೇಹಿತರನ್ನು ಕೂಟದ ಸದಸ್ಯರಾಗುವಂತೆ ಮಾಡಲು ಪ್ರಯತ್ನಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ.

ಫೆಬ್ರವರಿ ಎರಡು, 1972 ರ ವರೆಗೆ ಕೂಟದ ಸದಸ್ಯರ ಬಗೆ ಮತ್ತು ಸಂಖ್ಯೆ ಈ ಕೆಳಗಿನಂತಿದೆ.

ಕನ್ನಡ ಕೂಟ ಸದಸ್ಯ ಬಗೆ ಮತ್ತು ಸಂಖ್ಯೆ
(ಫೆಬ್ರವರಿ 2, 1972)

| | ಆಜೀವ ಸದಸ್ಯರು | ದಂಪತಿ ಸದಸ್ಯರು | ಏಕಾಂಗಿ ಸದಸ್ಯರು | ವಿದ್ಯಾರ್ಥಿ ದಂಪತಿ | ವಿದ್ಯಾರ್ಥಿ ಏಕಾಂಗಿ | ಒಟ್ಟು |
|---|---|---|---|---|---|---|
| ಕೂಟದ ಸದಸ್ಯ ಬಗೆ | ... | 50 | 32 | 10 | 18 | 110 |
| ಕೂಟದ ಮತದಾನ ಸದಸ್ಯರು | ... | 100 | 32 | 20 | 18 | 170 |

Kannada Kuta Newsletter

March 1972 Vol. 1 No. 2

Editors: M. Krishnappa
K.S. Sripada Raju

Design & Production
S.N. Prakash

## ಕನ್ನಡ ಚಲನಚಿತ್ರ

ಶ್ರೀಮತಿ ನಳಿನಿ

ಮೈಸೂರು ಸರ್ಕಾರದ ಚಲನಚಿತ್ರ ವಿಭಾಗದವರು, ಕನ್ನಡ ಚಿತ್ರಗಳನ್ನು ಹೊರದೇಶದಲ್ಲಿ, ಹೊರ ಸಂಸ್ಕೃತಿ ವಲಯಗಳಲ್ಲಿ ಪ್ರಸಾರ ಮಾಡಲು ಸೌಲಭ್ಯಗಳನ್ನು ನೀಡುತ್ತಾರೆಂದು ತಿಳಿದು ಬಂದಿದೆ. ಈ ಅವಕಾಶವನ್ನರಿತು ಕನ್ನಡ ಕೂಟ ಮೈಸೂರು ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿ ಕನ್ನಡ ಚಿತ್ರಗಳನ್ನು ತರಿಸುವ ಪ್ರಯತ್ನದಲ್ಲಿ ತೊಡಗಿದೆ. ಖಾಸಗೀ ಚಿತ್ರ ಸಂಸ್ಥೆಗಳೊಂದಿಗೂ ಕೂಡ ಪತ್ರ ವ್ಯವಹಾರವು ನಡೆಯುತ್ತಿದೆ.

ಚಿತ್ರವನ್ನು ತರಿಸಿದ ನಂತರ ಅಮೆರಿಕದಲ್ಲಿ, ಕೆನಡಾದಲ್ಲಿ ಕನ್ನಡ ಅಭಿಮಾನಿಗಳು ದಟ್ಟವಾಗಿರುವ ನೆಲೆವೀಡುಗಳಲ್ಲಿ - ಆಯಾ ಸ್ಥಳದ ಗುಂಪಿನವರಿಂದ ಸಹಕಾರ ಪಡೆದು ಚಿತ್ರವನ್ನು ತೋರಿಸಬೇಕೆಂಬ ಯೋಜನೆ ಇದೆ.

ತರಿಸಲು ಪ್ರಯತ್ನಿಸುತ್ತಿರುವ ಚಿತ್ರಗಳ ಪಟ್ಟಿಯಲ್ಲಿ "ಸಂಸ್ಕಾರ" "ಶರಪಂಜರ" "ಗೆಜ್ಜೆಪೂಜೆ" "ಕೃಷ್ಣದೇವರಾಯ" ಮುಂತಾದವುಗಳಿವೆ. "ಸಂಸ್ಕಾರ" ಎಂಬ ಚಿತ್ರಕ್ಕೆ ರಾಷ್ಟ್ರಪತಿ ಸುವರ್ಣ ಪದಕ ದೊರಕಿರುವುದೆಂದು ಕೇಳಿದ್ದೇವೆ.

## ಸದಸ್ಯ ದರ್ಶಿಕೆ (Membership Directory)

S.N. ಪ್ರಕಾಶ್

ಕನ್ನಡ ಕೂಟದ ಸದಸ್ಯರ ವಿಳಾಸ, ವಿವರಗಳನ್ನೊಳಗೊಂಡ ಒಂದು ಪುಟ್ಟ ಸದಸ್ಯ ದರ್ಶಿಕೆಯನ್ನು ಆಗಸ್ಟ್ (1971) ತಿಂಗಳಲ್ಲಿ ಹೊರ ತಂದಿದ್ದೇವೆ. ಅದರ ತಯಾರಿಕೆಯ ಖರ್ಚನ್ನು ಸದಸ್ಯರು ಪ್ರತ್ಯೇಕವಾಗಿ ದಾನರೂಪದಲ್ಲಿ ಕೊಟ್ಟಿದ್ದಾರೆ.

ಕನ್ನಡ ಕೂಟ ಸದಸ್ಯರಲ್ಲದಿದ್ದರೂ ಕನ್ನಡ ನಾಡಿನಿಂದ ಬಂದಿರುವ, ಕನ್ನಡ ನಾಡಿನ ಅಭಿಮಾನವಿರುವ ಮತ್ತೂ ಅನೇಕ ಮಹಿಳೆಯರ, ಮಹನೀಯರ ವಿಳಾಸಗಳು ನಮ್ಮಲ್ಲಿವೆ. ಅವುಗಳನ್ನು ಪ್ರಕಟಿಸಬೇಕೆಂಬ ಅಭಿಲಾಷೆಯುಂಟು. ಆ ಕೆಲಸ ಪೂರ್ತಿ ಮಾಡಲಾಗಿಲ್ಲ. ಅದರ ಅವಶ್ಯಕತೆ ಬಹಳ ಜನಗಳಿಗೆ ಇಲ್ಲವೇನೋ ಎನ್ನಿಸಿತು. ಅವಶ್ಯಕವೆಂದು ನಿಮಗನಿಸಿ ಕೊಂಚ ಧನಸಹಾಯ ಮಾಡಿದರೆ ಆ ಕೆಲಸವನ್ನು ಪೂರೈಸುತ್ತೇವೆ.

## ಕನ್ನಡ ಕೂಟದ ಹಣಕಾಸು

S. N. ಭಟ್

ಕನ್ನಡ ಕೂಟದ ಹಣವನ್ನು ಆನ್ ಆರ್ಬರ್‌ನಲ್ಲಿರುವ ನ್ಯಾಷನಲ್ ಬ್ಯಾಂಕ್ ಆಂಡ್ ಟ್ರಸ್ಟ್‌ನಲ್ಲಿ ಎರಡು ಬಗೆಯ ಲೆಕ್ಕಗಳನ್ನು ಇಟ್ಟಿದ್ದೇವೆ. ಚೆಕಿಂಗ್ ಲೆಕ್ಕದಲ್ಲಿ 124.20 ಡಾಲರ್ ಮತ್ತು ಉಳಿತಾಯದ ಲೆಕ್ಕದಲ್ಲಿ 301.91 ಡಾಲರ್ ಹಣವನ್ನು ಇಡಲಾಗಿದೆ. ಈ ಉಳಿತಾಯದ ಲೆಕ್ಕದಲ್ಲಿರುವ ಮೊಬಲಗಿನ ಮೇಲೆ ಶೇಕಡ 4 ವರ್ಷಕ್ಕೆ ಬಡ್ಡಿ ಬರುತ್ತದೆ.

ಇದುವರೆಗೆ (ಫೆಬ್ರವರಿ ಒಂದು, 1972) ನಡೆದಿರುವ ವ್ಯವಹಾರವನ್ನು ಈ ಕೆಳಗೆ ತೋರಿಸಿದೆ.

| ಸಂದಾಯ: | ಡಾ. ಸೆಂ. |
|---|---|
| ಯುಗಾದಿ ಮೂಲ ನಿಧಿ | 157.31 |
| ಸದಸ್ಯರಿಂದ ಚಂದಾ | 480.00 |
| ಸದಸ್ಯ ದರ್ಶಿಕೆ ನಿಧಿ | 48.00 |
| ಬಡ್ಡಿ ಹಣ ವಗೈರೆ | 7.91 |
| ಒಟ್ಟು | 693.22 |

| ವ್ಯಯ: | |
|---|---|
| ಕನ್ನಡ ಕೂಟ ಸಮಾಚಾರ (ಸಂಚಿಕೆಗಳು) ಪತ್ರಿಕೆ | 138.32 |
| ಕಾಗದ-ಪತ್ರ, ಅಂಚೆ ಖರ್ಚು, ಬ್ಯಾಂಕ್ ಪತ್ರ ವ್ಯವಹಾರ ವಗೈರಾ | 37.89 |
| ಸದಸ್ಯತ್ವ ಬೆಳವಣಿಗೆ | 27.75 |
| ದಸರ ಸಮಾರಂಭಕ್ಕೆ ಕರೆ | 19.01 |
| ಸದಸ್ಯ ದರ್ಶಿಕೆ | 44.14 |
| ಒಟ್ಟು | 267.11 |
| ನಗದು ಹಣ | |
| ಚೆಕಿಂಗ್ ಲೆಕ್ಕ | 124.20 |
| ಉಳಿತಾಯ ಲೆಕ್ಕ | 301.91 |
| ಒಟ್ಟು | 426.11 |

ಸಂದಾಯ = ವ್ಯಯ + ನಗದು ಹಣ

$693.22 = $267.11 + $426.11

## ವಿಜ್ಞಾನ ಮತ್ತು ತಾಂತ್ರಿಕ ಸಾಹಿತ್ಯ

ಅಮೇರಿಕ-ಕೆನಡದಲ್ಲಿರುವ ಕನ್ನಡ ಭಾಷೆ ಬಲ್ಲ ಬಹಳ ಜನಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕ ವೃತ್ತಿಗೆ ಸಂಬಂಧಿಸಿದವರೇ ಹೆಚ್ಚೆಂದು ಭಾವಿಸಬಹುದು. ವಿಜ್ಞಾನದ ವಿವಿಧ ಶಾಖೆಗಳಲ್ಲಿ ಉನ್ನತವಾದ ಅಧ್ಯಯನ ಮಾಡಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯಲ್ಲಿಯೋ, ಶಿಕ್ಷಣದಲ್ಲಿಯೋ ಅನೇಕರು ಕೆಲಸ ಮಾಡುತ್ತಿರಬಹುದು. ಖಾಸಗಿ ಉದ್ದಿಮೆಗಳಲ್ಲಿ ಮತ್ತೂ ಅನೇಕರು ಕೆಲಸ ಮಾಡುತ್ತಿರಬಹುದು. ಹಾಗೆ ಬಹಳ ಕೃಷಿ ಮಾಡುವವರು ಪ್ರತಿವರ್ಷವೂ ಒಂದಲ್ಲ ಒಂದು ಸಂದರ್ಭದಲ್ಲಿ ತಮ್ಮ ಅಧ್ಯಯನ-ಸಂಶೋಧನ ರಂಗದಲ್ಲಿ ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿ ಪ್ರೌಢ ಪ್ರಬಂಧ, ಪತ್ರಿಕೆಗಳನ್ನು ರಚಿಸಿ, ಪ್ರಸಿದ್ಧಪಡಿಸಿ ವಿಜ್ಞಾನ ಪ್ರಸಾರದಲ್ಲಿ ಭಾಗಿಗಳಾಗಿದ್ದಾರೆ ಎಂದು ಪರಿಭಾವಿಸಿದ್ದೇವೆ. ಈ ವಿಜ್ಞಾನ ಪರಿಶ್ರಮ ಮತ್ತು ಕೃಷಿಯ ಒಂದು ಅಂಶ ಭಾಗವನ್ನಾದರೂ ಕನ್ನಡ ಭಾಷೆಯ ವಿಜ್ಞಾನ ಸಾಹಿತ್ಯಕ್ಕೆ ಹರಿಸುವ ಪ್ರಯತ್ನವನ್ನು ನಾವು ಮಾಡಬೇಕು. ಆ ದಿಶೆಯಲ್ಲಿ ಕನ್ನಡ ಭಾಷಾ ಪರಿಚಿತ ವಿಜ್ಞಾನಿಗಳು ಮತ್ತು ತಾಂತ್ರಿಕರು ನೆರವು ನೀಡಬೇಕೆಂದು ಕೇಳುತ್ತೇವೆ.

ಇದರ ಬಗ್ಗೆ ಅಭಿಲಾಷೆ ಇಟ್ಟು, ಸಂಘಟನ, ಸಂಪಾದನ ಕಾರ್ಯದಲ್ಲಿ ಮುಂದಾಳಾಗಿ ಕೆಲಸ ಮಾಡುವವರು ಬೇಕು. ಅಂಥ ಉತ್ಸಾಹಿಗಳು M. Krishnappa,
420 Gale BLVD
Melvindale, Michigan 48122
ಇವರಿಗೆ ಬರೆದು ಸಲಹೆ ಮತ್ತು ವಿಧಾನಗಳನ್ನು ತಿಳಿಸಬೇಕಾಗಿ ಕೋರುತ್ತೇವೆ.

### ಯುಗಾದಿಯ ಶುಭಾಶಯಗಳು

ಕನ್ನಡ ಕೂಟವು ಕನ್ನಡಿಗರೆಲ್ಲರಿಗೂ, ಅವರ ಮಿತ್ರರು ಮತ್ತು ಬಂಧು ಬಾಂಧವರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತದೆ.

# ಸಾಂಸ್ಕೃತಿಕ ಕಾರ್ಯಕ್ರಮಗಳು

M. ಕೃಷ್ಣಪ್ಪ

ಕನ್ನಡಿಗರ ಒಂದು ಸಂಸ್ಥೆ, ಅಥವ ಸಂಘವನ್ನು ರಚಿಸಲು ಪ್ರಯತ್ನಿಸಬೇಕೆಂಬ ಸ್ಫೂರ್ತಿ ನಮ್ಮೆಲ್ಲರ ಮನಸ್ಸಿನಲ್ಲಿ ಅಂಕುರವಾದಾಗಿನಿಂದಲೂ, ಇಂತಹ ಸಂಘದ ಅಸ್ತಿತ್ವದಲ್ಲಿ, ನಾವು ನಡೆಸಬಹುದಾದ ಮುಖ್ಯ ಚಟುವಟಿಕೆಗಳಲ್ಲಿ, ಸ್ವಾಭಾವಿಕವಾಗಿಯೇ ಎಲ್ಲರಿಗೂ ಮೊದಲು ತೋರಿದ ಒಂದು ಅಂಶ, ಸಾಂಸ್ಕೃತಿಕ ಹಾಗೂ ಲಲಿತ ಕಲೆಗಳಿಗೆ ಸಂಬಂಧಪಟ್ಟದ್ದು. ಈ ವಿಷಯದಲ್ಲಿ, ಇದುವರೆಗೆ ನಡೆದುಕೊಂಡಿರುವ ಕಾರ್ಯಕ್ರಮಗಳ ವರದಿಯನ್ನು ಇಲ್ಲಿ ಕೊಡಲಾಗಿದೆ.

ಪ್ರಥಮವಾಗಿ ಹೇಳಬೇಕಾದ್ದು ನಮ್ಮ "ಕನ್ನಡ ಕೂಟ"ದ ಪ್ರಾರಂಭವಾದ ದಿನ ಏರ್ಪಡಿಸಿದ್ದ ಮನರಂಜನೆಯ ಕಾರ್ಯಕ್ರಮ. ಇದೇ ಉದ್ದೇಶಕ್ಕಾಗಿ ಕೆಲವು ವಾರಗಳ ಮುಂಚೆಯಿಂದ ಅಭ್ಯಾಸ ಮಾಡಿದ್ದ "ಚೆಲುವಯ್ಯ ಚೆಲುವೋ—" ಕೋಲಾಟವನ್ನು ಪ್ರದರ್ಶಿಸಲಾಯಿತು. ಅನೇಕರು ಸುಶ್ರಾವ್ಯವಾಗಿ ಬಗೆಬಗೆಯ ಗೀತೆಗಳನ್ನು ಹಾಡಿದರು. ಸಮಾವೇಶನಕ್ಕೆ ಅನೇಕ ಊರುಗಳಿಂದ ಬಂದಿದ್ದವರೆಲ್ಲರೂ ಈ ಸ್ಥಳದಲ್ಲಿ, ಪ್ರಾಯಶಃ ಈ ದೇಶದಲ್ಲೇ ಮೊದಲಬಾರಿಗೆ ಕೋಲಾಟವನ್ನು ವೀಕ್ಷಿಸಿ ವಿಶೇಷ ಸಂತೋಷ ಮತ್ತು ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಇದೇ ಕೋಲಾಟವನ್ನು, ಕೇಸ್-ವೆಸ್ಟರ್ನ್ ರಿಜರ್ವ್ ಯೂನಿವರ್ಸಿಟಿಯ "ಇಂಡಿಯಾ ವಿದ್ಯಾರ್ಥಿ ಸಂಘದ ಪ್ರತಿನಿಧಿಗಳ ಕೋರಿಕೆಯಂತೆ ಆ ಸಂಘದ ವಸಂತೋತ್ಸವ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು.

ಎಲ್ಲರೂ ಒಂದು ಕಡೆ ಕಲೆತು ಗೂಡಿನ ಜೇನುಗಳಂತೆ ಕೆಲಸ ಮಾಡಿದರೆ ಹಿತಕರವಾದ ಫಲಿತಾಂಶಗಳನ್ನು ಗಳಿಸಬಹುದೆಂಬ ಉತ್ತೇಜಕರವಾದ ನಂಬಿಕೆಗೆ (ಪ್ರಾಧ್ಯಾಪಕ ಶ್ರೀ ಪದ್ಮನಾಭ ಜೋಯಿಸರವರ ಮನೆಯಲ್ಲಿ ಕೋಲಾಟದ ಅಭ್ಯಾಸ ನಡೆದಾಗಲೆಲ್ಲಾ ಸಿಗುತ್ತಿದ್ದ ಮಾತು-ಕತೆಗಳು, ಊಟ-ತಿಂಡಿಗಳು, ನಗುವು-ಸಂತೋಷಗಳಿಂದ ಕೂಡಿದ ವಾತಾವರಣ — ಇವುಗಳ ಚಿತ್ರ ಕಣ್ಣ ಮುಂದೆ ಬರುತ್ತದೆ.) ಈ ಘಟನೆಗಳು ಸಾಕ್ಷಿಯಾದುವು.

ಈ ಬಗೆಯ ಚಟುವಟಿಕೆಗಳನ್ನು ಸರಿಯಾದ ದಾರಿಯಲ್ಲಿ ಮುಂದುವರಿಸುವುದು, ಅವಕಾಶ ಮತ್ತು ಸಂದರ್ಭಗಳ ಕೊರತೆಯುಂಟಾಗಿ ಇಲ್ಲಿ ನಡೆಯುವ ಪ್ರದರ್ಶನಗಳಲ್ಲಿ ಭಾಗವಹಿಸಲು ಆಗದಿದ್ದ ನಮ್ಮ ಮಿತ್ರರನ್ನು ಒಂದುಗೂಡಿಸುವುದು, ನಮ್ಮ ಕನ್ನಡ ಕೂಟದ ಮತ್ತು ಇತರ ಸಂಘ ಸಂಸ್ಥೆಗಳ ಸಮಾರಂಭಗಳಲ್ಲಿ ಭಾಗವಹಿಸುವುದು — ಈ ಮುಖ್ಯ ಉದ್ದೇಶಗಳಿಂದೊಡಗೂಡಿದ ಒಂದು ಸಾಂಸ್ಕೃತಿಕ ತಂಡವನ್ನು ರಚಿಸಬೇಕೆಂದು ನನ್ನ ಮನಸ್ಸಿನಲ್ಲಿ ಒಂದು ತೀವ್ರವಾದ ಅಭಿಲಾಷೆಯುಂಟು. ಇದಕ್ಕೆ ಬೇಕಾದ ಎಲ್ಲರ ಮೆಚ್ಚುಗೆ ಹಾಗೂ ಒಪ್ಪಿಗೆ ದೊರೆತವು. ಇದರಿಂದಾಗಿ ಈ ವಿಷಯಗಳಲ್ಲಿ ಆಸಕ್ತಿಯುಳ್ಳ, ಭಾಗವಹಿಸಲು ಶಕ್ತರಾಗಿರುವವರ ಸಲಹೆಗಳನ್ನು ಮುಖತಃ ಪಡೆಯಲು ಜುಲೈ 8 ನೇ ತಾರೀಖಿನ ದಿನ ನಮ್ಮ ಮನೆಯಲ್ಲಿ ಒಂದು ಸಮಾವೇಶನವನ್ನು ಏರ್ಪಡಿಸಿದ್ದೆವು. ಸಂಗೀತ, ನೃತ್ಯ ನಾಟಕ ಮುಂತಾದುವುಗಳಲ್ಲಿ ಪಾತ್ರವಹಿಸಲು ಇಚ್ಛಿಸುವವರ ಸಮ್ಮಿತ್ರರ ಒಂದು ತಂಡದ ರಚನೆಯ ಅವಶ್ಯಕತೆ ಮತ್ತು ಅದು ಕೆಲಸ ಮಾಡುವ ರೀತಿಯನ್ನು ಕುರಿತು ಆಲೋಚನೆಗೆ ಇಡಲಾಯಿತು. ಇದಕ್ಕೆ ಎಲ್ಲರೂ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು.

ಕಾಲಾವಕಾಶದ ಕೊರತೆ ಮತ್ತು ಎಲ್ಲರಿಗೂ ಒಂದೇ ಸಮಯದಲ್ಲಿ ಅನುಕೂಲವಾಗದಿರುವುದು ಈ ಮುಖ್ಯ ಕಾರಣಗಳಿಂದ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲಾಗಿಲ್ಲ. ಈ ಮಾತ್ರದಿಂದ ನಾವು ನಿರುತ್ಸಾಹಗೊಳ್ಳಬೇಕಿಲ್ಲ. ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಸುತ್ತಮುತ್ತಲೂ ಏನೂ ಇಲ್ಲದಿರುತ್ತಿದ್ದ ವಾತಾವರಣದಲ್ಲಿ ಕೆಲವು ಕಾರ್ಯಕ್ರಮಗಳನ್ನು ನಡೆಸಿಕೊಳ್ಳಬೇಕೆಂದು ದೃಢ ಮನಸ್ಸಿನಿಂದ ಮೊದಲ ಹೆಜ್ಜೆ ಇಟ್ಟಿರುವುದೇ ಒಂದು ದೊಡ್ಡ ಪ್ರಗತಿಯೆಂದು ನನ್ನ ನಂಬಿಕೆ. ಈ ಮೊದಲ ಹೆಜ್ಜೆ ಹಿಡಿದು ಸಾಧನೆಗೆ ನಾಂದಿಯಾಗಲೆಂದು ನಾವೆಲ್ಲರೂ ಆಶಿಸೋಣ, ಒಂದುಗೂಡಿ ಕೆಲಸ ಮಾಡೋಣ.

# ದಸರ ಪ್ರಿಯದರ್ಶನ

ಅಕ್ಟೋಬರ್ ಎರಡು, 1971 ರಂದು ಕನ್ನಡ ಕೂಟದ ಮಿಚಿಗನ್ ವೃಂದದವರು ದಸರ ಹಾಗೂ ಗಾಂಧೀ ಜಯಂತಿಯನ್ನು ಫ್ಲಿಂಟ್, ಮಿಚಿಗನ್‌ನಲ್ಲಿ ಆಚರಿಸಿದರು.

ಸುಮಾರು 50 ಜನ ಕೂಡಿದ್ದರು.

ಪ್ರಾಧ್ಯಾಪಕ ಪದ್ಮನಾಭ ಜೈನಿ (ಮಿಚಿಗನ್ ವಿಶ್ವವಿದ್ಯಾನಿಲಯ) ಅವರು ದಸರ ಪ್ರಾಮುಖ್ಯತೆಯನ್ನು ಕುರಿತು ಮಾತನಾಡಿದರು.

ದೇಹಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಶ್ರೀ ಕೃಷ್ಣಕುಮಾರ್ (ಮಿಚಿಗನ್ ಸ್ಟೇಟ್ ವಿಶ್ವವಿದ್ಯಾಲಯ) "Mahatma Gandhi's Relevance to the present times" ಎಂಬ ವಿಷಯವಾಗಿ ಭಾಷಣ ಮಾಡಿದರು.

ಕಲಾಪದ ಅಂಗವಾಗಿ ಮಹಾತ್ಮ ಗಾಂಧಿಯನ್ನು ಕುರಿತ ಡಾಕ್ಯುಮೆಂಟರಿ ಚಿತ್ರವನ್ನು ತೋರಿಸಲಾಯಿತು.

ಕನ್ನಡ ವಾಙ್ಮಯದ ಸುಮಾರು 300 ಪುಸ್ತಕಗಳ ಪ್ರದರ್ಶನ ಬಹಳ ಉದ್ಬೋಧಕವಾಗಿತ್ತು. ಮಿಚಿಗನ್ ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ಮಿಚಿಗನ್ ವಿಶ್ವವಿದ್ಯಾನಿಲಯದ ನೆರವಿನಿಂದ ಪುಸ್ತಕಗಳು ದೊರಕಿದ್ದವು.

ಈ ಪುಸ್ತಕ ಪ್ರದರ್ಶನದಲ್ಲಿ

ಶ್ರೀ ಕುವೆಂಪು, ಬೇಂದ್ರೆ, ಮಾಸ್ತಿ, ಗೋವಿಂದ ಪೈ, ವಿ.ಸೀ. ಪು.ತಿ.ನ. ಡಿ.ವಿ.ಜಿ, ಅಡಿಗ, ಶಿವರುದ್ರಪ್ಪ, ರಾಮಾನುಜನ್ .... ಅವರ ಕಾವ್ಯ-ಕವನಗಳೂ, ಅ.ನ.ಕೃ. ಬಸವರಾಜ ಕಟ್ಟೀಮನಿ, ಪುರಾಣಿಕ, ಕಾರಂತ, ತ್ರಿವೇಣಿ, ಸರೋಜ ರಾವ್, ಇಂದಿರಾ, ಭೈರಪ್ಪ .... ಇವರ ಕಾದಂಬರಿಗಳೂ, ಗೋವಿಂದ ಪೈ, ಕುವೆಂಪು, ಕಾರಂತ, ಡಿ.ಎಲ್.ಎನ್, ಶಿವಮೂರ್ತಿ ಶಾಸ್ತ್ರಿಗಳು .... ಇವರ ಅಭಿನಂದನ ಗ್ರಂಥಗಳೂ, ಕನ್ನಡ ವಿಶ್ವಕೋಶದ ಎರಡು ಸಂಪುಟಗಳೂ, ಪ್ರಬುದ್ಧ ಕರ್ನಾಟಕದ ಚಿನ್ನದ ಸಂಚಿಕೆಗಳೂ, ಬಸವೇಶ್ವರ ಸಾಹಿತ್ಯ, ಶಿವಶರಣರ ಕೃತಿಗಳು, ಜೈನ ಧರ್ಮಗ್ರಂಥ, ಹರಿದಾಸ ಕೃತಿಗಳು, ಜಾನಪದ ಕವನ ಸಂಗ್ರಹಗಳು, ಗಾಂಧೀ ಸಾಹಿತ್ಯ, ಕರ್ನಾಟಕದ ಇತಿಹಾಸ, ಶಿಲಾಶಾಸನಗಳ ದರ್ಶನ, ಕರ್ನಾಟಕ ಜನಜೀವನ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ .... ಇವುಗಳನ್ನು ಕುರಿತ ಪ್ರೌಢ ಕೃತಿಗಳು — ಹೀಗೆ ಸಾಹಿತ್ಯದ ವಿವಿಧ ಶಾಖೆಗಳು ಪ್ರದರ್ಶನದಲ್ಲಿದ್ದುವು.

ದಸರ ಸಮಾರಂಭಕ್ಕೆ ಸ್ಥಳ, ಬಂದವರಿಗೆ ಆದರ-ಆತಿಥ್ಯ — ಇವುಗಳ ಏರ್ಪಾಟನ್ನು ಶ್ರೀಮಾನ್ ಹನುಮಂತಯ್ಯನವರು ಮತ್ತು ಶ್ರೀಮತಿ ಹನುಮಂತಯ್ಯನವರು ಬಹಳ ಮುತುವರ್ಜಿಯಿಂದ ಮಾಡಿದ್ದರು.

ಊಟ-ಉಪಚಾರದ ಭಾರವನ್ನು ಶ್ರೀಮತಿಗಳಾದ ರೇಣುಕ ನಾಗರಾಜು (ಆ್ಯನ್ ಆರ್ಬರ್), ನಳಿನಿ ಕೃಷ್ಣಪ್ಪ (ಡಿಟ್ರಾಯಿಟ್), ಶಶಿ ಜೈನಿ (ಆ್ಯನ್ ಆರ್ಬರ್), ದೀನ ಭಟ್ (ಆ್ಯನ್ ಆರ್ಬರ್), ಲಕ್ಷ್ಮೀ ನಾರಾಯಣ್ (ಮಿಡ್‌ಲ್ಯಾಂಡ್), ಯಶೋದ ಹಿರೇಮಠ (ಕಲಮಜೂ), ಶೋಭಾ ಗೌಡ್ (ಕಲಮಜೂ), ಲಲಿತ ಹನುಮಂತಯ್ಯ (ಫ್ಲಿಂಟ್), ಹಾಗೂ ಕಮಲ ಸತ್ಯನಾರಾಯಣ — ಇವರುಗಳು ಬಹಳ ಆಸ್ಥೆಯಿಂದ ನಿರ್ವಹಿಸಿದ್ದರು.

ಶ್ರೀಮತಿ ಲೋಕೇಶ್ವರಿ ನಾಗಮೋಹನ್ (ಚಿಕಾಗೊ) ಅವರು ಕನ್ನಡ ಗೀತೆಗಳನ್ನು ಬಹು ಮನರಂಜಕವಾಗಿ ಹಾಡಿದರು.

ಶ್ರೀ ಸತ್ಯನಾರಾಯಣ ಮತ್ತು ಶ್ರೀಮತಿ ಕಮಲ ಸತ್ಯನಾರಾಯಣ (ಷಾರ್ಲಾಟ್) ಅವರು ಕೊಳಲು ಮತ್ತು ಪಿಟೀಲಿನ ಸುಶ್ರಾವ್ಯ ಶಾಸ್ತ್ರೀಯ ಸಂಗೀತವನ್ನು ಶ್ರವಣ ಮಾಡಿಸಿದರು.

## ಸುಂದರ ಲಿಪಿಕಾರರು ಬೇಕು

ಕನ್ನಡ ಅಕ್ಷರಗಳನ್ನು ಸುಂದರವಾಗಿ ಬರೆದು ಕನ್ನಡಕೂಟ ಸಮಾಚಾರ ಪತ್ರದ ಅಂದವನ್ನು ಹೆಚ್ಚಿಸುವ ಮಂದಿ ನಮ್ಮ ನೆರವಿಗೆ ಬರಬೇಕು.

# ಮಕ್ಕಳ ಮಂಟಪ

ಕನ್ನಡ ಕೂಟದ ಮಕ್ಕಳು, ಅವರ ವಿನೋದ, ವಿಲಾಸ, ವಿಹಾರ, ಅಲಂಕರಣ, ಆಟಪಾಟಗಳು, ಅಭಿರುಚಿ, ಅವರಿಗೆ ಮೆಚ್ಚಿದ್ದು, ಮೆಚ್ಚದ್ದು, ವಿದ್ಯಾಭ್ಯಾಸ, ನಡೆ-ನುಡಿಗಳನ್ನು ರೂಪಿಸುವ ವಿಧಾನ, ಛಾಯಾಚಿತ್ರಗಳು— ಇವುಗಳನ್ನು ಕುರಿತು ವಿಷಯ ಸಂಗ್ರಹಣೆ ಮಾಡಿ ಚಿತ್ರಪೂರ್ಣವಾದ ಒಂದು ಸಂಚಿಕೆಯನ್ನು ಮಾಡಬೇಕೆಂಬ ಅಭಿಲಾಷೆ ಇದೆ. ಈ ತೆರನಾದ ಕೆಲಸಕ್ಕೆ ಉತ್ಸಾಹ ಪರಿಣತಿ ಉಳ್ಳವರು

Dr. M. Nagaraju
1586 Murfin, Apt 32
ANN ARBOR Mich. 48105

ಇವರಿಂದ ಹೆಚ್ಚಿನ ವಿವರಗಳನ್ನು ಪಡೆಯಬಹುದು. ನಿಮ್ಮ ಸಲಹೆ, ಅದರಲ್ಲೂ ಮಕ್ಕಳ ತಾಯಿ-ತಂದೆಯರ ಸಹಕಾರ ಅತ್ಯಗತ್ಯ.

# ಪಂಪ ಅಧ್ಯಾಯ ಆರಂಭ

ಮಿಚಿಗನ್ನಿನಲ್ಲಿ ಕನ್ನಡ ಕೂಟದವರು ಮಿಚಿಗನ್ ಅಧ್ಯಾಯ (Michigan Chapter) ವನ್ನು 'ಪಂಪ' ಎಂಬ ಹೆಸರಿನಲ್ಲಿ ಪ್ರಾರಂಭಿಸಿದ್ದಾರೆ. ಡಾ. ರಾಯಚೂರ್ ಸತ್ಯನಾರಾಯಣ (745 West Sheperd, Charlotte Michigan 48813) ಅವರು ಪಂಪ ಅಧ್ಯಾಯದ ಸಂಘಟಕರು.

# ಅತಿಥಿ-ಸತ್ಕಾರ
## ಮಾಡಲಿಚ್ಛಿಸುವವರಿಗೆ

ಶ್ರೀಮತಿ ಶಶಿ ಜೈನ

ಕನ್ನಡ ನಾಡಿನ ಗೃಹ ವಾತಾವರಣ, ಆತಿಥ್ಯ ವಿಧಾನ, ಮನೆಯ ಅಲಂಕರಣ, ನಡಾವಳಿ, ಊಟ-ಉಪಚಾರ ಪದ್ಧತಿಗಳು ಹೇಗಿರುತ್ತವೆ? ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಅಮೆರಿಕದಲ್ಲಿಯ ಕನ್ನಡ ಮನೆಗಳಲ್ಲಿ ನೋಡಬೇಕು, ನುಡಿಯಬೇಕು ಎಂದು ಬಯಸುವವರಿದ್ದಾರೆ. ಅಂಥವರಿಗೆ ನೋಡುವ, ಭೇಟಿಮಾಡುವ ಅವಕಾಶ ಮಾಡಿಕೊಡಬೇಕು. ಕನ್ನಡ ಕೂಟದ ಸದಸ್ಯರಲ್ಲಿ ಈ ಬಗೆಯ ಆತಿಥ್ಯ ಪ್ರೀತಿ ಆಮಂತ್ರಣ ಕೊಡುವ ಗೃಹಸ್ಥರು ದಯವಿಟ್ಟು ಕನ್ನಡ ಕೂಟಕ್ಕೆ ತಮ್ಮ ಹೆಸರನ್ನು ಸೂಚಿಸಬೇಕು. ಅವಕಾಶ ಒದಗಿದಾಗ ಸಾಕಷ್ಟು ವಿವರಗಳನ್ನು ತಿಳಿದು ಸೂಕ್ತವಾಗಿ, ಸುಲಭವಾಗಿ ಏರ್ಪಾಟುಗಳನ್ನು ಮಾಡಲು ಕನ್ನಡ ಕೂಟಕ್ಕೆ ಅನುಕೂಲವಾಗುತ್ತದೆ.

ಅದಲ್ಲದೆ, ಕನ್ನಡ ಕೂಟದ ಸದಸ್ಯರು ಅಮೆರಿಕ-ಕೆನಡಗಳಲ್ಲಿ ಅನೇಕ ಕಡೆ ಇದ್ದಾರೆ. ಯಾರಾದರೂ ಪ್ರವಾಸಿಗರಾಗಿ ಒಂದು ಕಡೆಯಿಂದ ಮತ್ತೊಂದು ಕಡೆ ಹೋದಾಗ "ಹೇಗಿದ್ದೀರಿ, ಏನು?" ಎನ್ನುವ ಮಾತು ಉಪಚಾರಕ್ಕಾದರೂ ಹೇಳುವರೆ ಮನಸ್ಸಿಗೆ ಎಷ್ಟೋ ನೆಮ್ಮದಿಯಾದಂತಾಗಿ ಆತ್ಮೀಯತೆ, ಉಭಯ-ಕುಶಲತೆ ಬೆಳೆಯುವಂತಾಗುತ್ತದೆ. ಅಂಥ ಉಪಚಾರ-ವ್ಯವಹಾರಕ್ಕೆ ತಯಾರು ಉಳ್ಳವರು ತಮ್ಮ ಹೆಸರು, ವಿಳಾಸವನ್ನು ಕನ್ನಡ ಕೂಟಕ್ಕೆ ನೀಡಬೇಕು.

### ಕನ್ನಡ ಟೈಪ್‌ರೈಟರ್ ಅವಶ್ಯ

ಅನೇಕ ಸ್ಖಾಲಿತ್ಯದಿಂದ ಕೂಡಿದ ಈ ಸಮಾಚಾರ ಪತ್ರಿಕೆಯನ್ನು ಓದಲು ನಿಮ್ಮ ಅನುಕಂಪ ಮತ್ತು ಶಾಂತ ಚಿತ್ತತೆ ಬೇಕು. ಈ ಪತ್ರಿಕೆಯ ಆಕಾರ, ಅಂದ, ಓರಣ ಇವುಗಳನ್ನು ಸುಸ್ಪಷ್ಟವಾಗಿ ಮನೋಹರವಾಗಿ ಮಾಡಲು ಕನ್ನಡ ಲಿಪಿ ಯಂತ್ರ (ಟೈಪ್‌ರೈಟರ್) ಅತ್ಯವಶ್ಯಕ. ಅದನ್ನು ಕೊಳ್ಳಲು ದುಡ್ಡಿನ ಸಂಗ್ರಹಣೆ ಮಾಡುವ ಯೋಚನೆ ಇದೆ.

# ಏನು? ಯಾರು? ಎಲ್ಲಿ? ಸುದ್ದಿ

## ಚಿಕಾಗೊನಲ್ಲಿ ಕನ್ನಡ ಕೂಟ ಸರ್ವಸದಸ್ಯಸಭೆ

ಈ ವರ್ಷ (1972) ಏಪ್ರಿಲ್ 8 ರಂದು ನಡೆಯುವ ಕನ್ನಡ ಕೂಟ ಸರ್ವ ಸದಸ್ಯ ಪ್ರಥಮ ವಾರ್ಷಿಕ ಸಭೆಗೆ ಆತಿಥ್ಯ ಕೊಟ್ಟು "ವಸಂತೋತ್ಸವಕ್ಕೆ ಚಿಕಾಗೊ ಕೇಂದ್ರದವರು ಆಮಂತ್ರಣ ನೀಡಿದ್ದಾರೆ. ಆ ಉತ್ಸಾಹೀ ಮಿತ್ರರ ಆಹ್ವಾನವನ್ನು ಒಪ್ಪಿಕೊಂಡು ಕನ್ನಡ ಕೂಟದ ಎಲ್ಲ ಸದಸ್ಯರ ಪರವಾಗಿ ನಮ್ಮ ಮೆಚ್ಚಿಕೆ ಮತ್ತು ಸಂತೋಷವನ್ನು ವ್ಯಕ್ತಪಡಿಸುತ್ತೇವೆ.

ಕನ್ನಡ ಕೂಟ ಸರ್ವ ಸದಸ್ಯ ಸಭೆಯ ಸಂದರ್ಭದಲ್ಲಿ ಕನ್ನಡ ವಿವಿಧ ಸಾಹಿತ್ಯ ಪ್ರಕಾರದ ಪುಸ್ತಕಗಳು, ಪತ್ರಿಕೆಗಳು ಮುಂತಾದುವನ್ನು ಪ್ರದರ್ಶಿಸುವ ಇಚ್ಛೆ ಇದೆ. ಇದಕ್ಕೆ ಸಂಬಂಧಿಸಿದಂತೆ ನಿಮ್ಮಲ್ಲಿ ಪುಸ್ತಕಗಳು... ಇತ್ಯಾದಿ ಇದ್ದರೆ ಅವುಗಳನ್ನು ಆ ದಿನದ ಮಟ್ಟಿಗೆ ತಂದರೆ ಪ್ರದರ್ಶನ ಯಶಸ್ವಿಯಾಗಲು ಸಾಧ್ಯ.

ಕನ್ನಡ ಕೂಟದ ಸಾಮಾನ್ಯ ಉದ್ದೇಶಗಳ ದೃಷ್ಟಿಕೋನದಲ್ಲಿ, ಒಂದು ಥರದ ಕೆಲವು ವಿಷಯಗಳನ್ನೊಳಗೊಂಡ ಬರಹಗಳು, ಚಿತ್ರ, ಚಿತ್ರಣಗಳ ನೆನಪಿನ ಸಂಚಿಕೆ (Souvenir) ಯನ್ನು ಮಾಡಬಹುದೆಂಬುದು ನಮಗೆ ಹೊಳೆದಿರುವ ಒಂದು ವಿಷಯ. ಇಂತಹ ಸಂಚಿಕೆಯನ್ನು ರಚಿಸಲು ಆಸಕ್ತಿಯುಳ್ಳ ಸದಸ್ಯರು ಯಾರಾದರೂ ಮುಂದೆ ಬಂದರೆ ಸಂತೋಷ. ಅಂಥವರಿಗೆ ಚಿಕಾಗೊವ ಸೌಲಭ್ಯಗಳನ್ನು ಮಾಡಿಕೊಡಲು ಕೂಟ ಸಿದ್ಧವಾಗಿದೆ.

## ಪತ್ರ ಸಂಪರ್ಕ

ಪರಸ್ಪರ ಸಂಪರ್ಕ ಕೂಟದ ಇರುವಿಕೆಯ ಆಧಾರದ ಮೂಲ. ನಮ್ಮ ಇಲ್ಲಿನ ಮಿತ್ರರೊಡನೆ ಸಂಪರ್ಕವಿಟ್ಟುಕೊಳ್ಳುವುದೇನೋ ಸುಲಭ. ಆದರೆ ನಮ್ಮ ಕೂಟದ ರಚನೆಯನ್ನು ಪ್ರಶಂಸಿಸಿ, ಅದರ ರಚನೆಗೆ ಪಾತ್ರರಾದ ಕೂಟದ ಸದಸ್ಯರನ್ನು ಹಾರ್ದಿಕವಾಗಿ ಅಭಿನಂದಿಸಿ, ಕೂಟಕ್ಕೆ ಯಶಸ್ಸನ್ನು ಕೋರಿ, ಮೈಸೂರು ದೇಶದ ಅನೇಕ ಭಾಗಗಳಿಂದ ನಮಗೆ ಪತ್ರ ಬರೆದ ಮಿತ್ರರೆಷ್ಟೋ?

ಕೂಟದ ಸ್ಥಾಪನೆಯ ಸಮಾಚಾರ ಮೈಸೂರು ದೇಶದ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ, ಅದಾದ ಒಂದೆರಡು ವಾರಗಳಲ್ಲೇ ಪ್ರಕಟವಾಯಿತು. ಅದನ್ನು ಓದಿ ಉಂಟಾದ ಸಂತೋಷವನ್ನು ತಡೆಯಲಾರದೆ ಅನೇಕ ಉತ್ಸಾಹಿಗಳು ಕಾಗದಗಳ ಮೂಲಕ ತಮ್ಮ ಸಂತೋಷವನ್ನು ಬರೆದು ವ್ಯಕ್ತಪಡಿಸಿದರು. ಮತ್ತೆ ಕೆಲವು ಬೆಂಗಳೂರಿನ ಮಿತ್ರರು, ನ. ರಾಮಲಕ್ಷ್ಮಣ, ವಿಜಯನ್ ಮತ್ತು ಪದ್ಮನಾಭ ಅವರು "ಸುಧಾ" ವಾರ ಪತ್ರಿಕೆಯನ್ನು ಕೂಟದ ಸದಸ್ಯರ ಓದಿಗಾಗಿ ಕಳುಹಿಸಿದರು. ಇವರೆಲ್ಲರಿಗೂ ಸೂಕ್ತವಾದ ಮೆಚ್ಚುಗೆಯ ಉತ್ತರಗಳನ್ನು ಬರೆಯಲಾಗಿದೆ. ಜೊತೆಗೆ ಇವರಿಗೆ ನಮ್ಮ ಕನ್ನಡ ಕೂಟ ಸಮಾಚಾರ ಪತ್ರಿಕೆಗಳನ್ನೂ ಕಳುಹಿಸುತ್ತೇವೆ.

## ಕನ್ನಡ ಕೂಟ ಕೋಶಾಧಿಕಾರಿ ಜಪಾನಿಗೆ

ಡಾ. ಎಸ್.ಎನ್. ಭಟ್ ಅವರು ಜಪಾನ್ ವಿಜ್ಞಾನ ವರ್ಧಕ ಸಂಸ್ಥೆಯ ಫೆಲೋಷಿಪ್ ಪಡೆದು ಜಪಾನಿನ ಟೋಕಿಯೋ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರ ವಿಭಾಗದಲ್ಲಿ ಸಂಶೋಧನೆಗೆ ಹೋಗಿದ್ದಾರೆ.

ಡಾ. ಭಟ್ ಅವರು ಕನ್ನಡ ಕೂಟದ ಕೋಶಾಧಿಕಾರಿಗಳಾಗಿ ಜನವರಿ 15 1972 ರ ವರೆಗೆ ಬಹಳ ಉತ್ಸಾಹ-ಶ್ರದ್ಧೆಯಿಂದ ದುಡಿದು ನಮ್ಮೆಲ್ಲರ ಮೆಚ್ಚಿಕೆಗೆ ಪಾತ್ರರಾಗಿದ್ದಾರೆ. ಅವರಿಗೆ ನಮ್ಮ "ಭೇಷ್" ಹೇಳುತ್ತಾ, ಅವರ ಜಪಾನ್ ವಾಸ ಹರ್ಷಮಯವಾಗಲೆಂದು ಹಾರೈಸುತ್ತೇವೆ.

Please mail to: Editor – Newsletter,
Kannada Kuta,
PO Box 509, Ann Arbor, MI 48107.

## ನಿಮ್ಮಲ್ಲಿಂದ ಸುದ್ದಿ ನಮಗೆ ಬೇಕು

(ನಿಮಗೆ ಅನುಕೂಲವೆನಿಸಿದ ಭಾಷೆಯಲ್ಲಿ)

ನಿಮ್ಮ ಹೆಸರು ______________

ವಿಳಾಸ ______________

______________

ಸುದ್ದಿ ಸೂಚಕಗಳು:

1. ಮದುವೆ - - - - - - - - -
   - - - - - - - - - -

2. ಮಕ್ಕಳ ಹುಟ್ಟು - - - - - - - -

3. ಮಕ್ಕಳ ಪ್ರಗತಿ (ವ್ಯಾಸಂಗ, ಆಟ-ಪಾಠ..)
   — — — — —

4. ನಿಮ್ಮ ವ್ಯಾಸಂಗ
   - ಯಾವ ಪದವಿ (Degree) - - - -
   - ವಿಷಯ (Subject area) - - -
   - ವಿಶ್ವವಿದ್ಯಾಲಯ/ಸಂಸ್ಥೆ - - - - -

5. ನಿಮ್ಮ ವೃತ್ತಿಗೆ ಸಂಬಂಧಿಸಿದ ನಿಮ್ಮ ಲೇಖನಗಳು

6. ನಿಮ್ಮ ಪ್ರವಾಸ, ಉದ್ಯೋಗ, ವ್ಯಾಸಂಗ ಸುದ್ದಿ

7. ಇತರ ಸುದ್ದಿಗಳು - - - - -

KANNADA KUTA

# NEWSLETTER

March 1972 Vol. 1 No. 2

K A N N A D A K U T A
An Association to cultivate Kannada culture in America
P.O. Box 505, Ann Arbor, Michigan 48107 USA

Prakash SN
815 Church St
Ann Arbor, MI 48104